<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
<u>ಶ್ರೀರಂಗಪಟ್ಟಣ.</u>     DW-2
ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 31.05.2024
ಪಾಟಿ ಸವಾಲು : ವಾದಿ ಪರ ವಕೀಲರಿಂದ

ಶಂಕರೇಗೌಡರು ನನಗೆ 1985 ರಿಂದ ಪರಿಚಯವಿರುತ್ತಾರೆ. ಶಿವಲಿಂಗೇಗೌಡರು ಮತ್ತು ನಾನು ಸಹಪಾಠಿಗಳು ಆದ ಕಾರಣ ನನಗೆ ಶಂಕರೇಗೌಡರ ಪರಿಚಯವಿರುತ್ತದೆ. ವಿಲ್ ಆದ ಸಂದರ್ಭದಲ್ಲಿ ಶಂಕರೇಗೌಡ ರವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವಿಲ್ ಆದಾಗ ನನ್ನ ವಯಸ್ಸು 18 ವರ್ಷವಿತ್ತು. ಆ ಸಂದರ್ಭದಲ್ಲಿ ನಾನು ಪಿಯುಸಿ ಓದುತ್ತಿದ್ದೇನು. ಶಂಕರೇಗೌಡರ ಕುಟುಂಬದಲ್ಲಿ ನಾನು ಪಂಚಾಯಿತಿದಾರನಾಗಿ ಹಾಗೂ ಬೇರೆ ವ್ಯವಹಾರಗಳಲ್ಲಿ ಭಾಗವಹಿಸಿರುವುದಿಲ್ಲ.

ವಿಲ್ ಮಾಡುವ ವಿಚಾರವನ್ನು ನನಗೆ ಶಿವಲಿಂಗೇಗೌಡರು ತಿಳಿಸಿರುತ್ತಾರೆ. ಶಿವಲಿಂಗೇಗೌಡರು 5 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ವಿಲ್ ಮಾಡುವ ದಿನದಂದೇ ಈ ವಿಚಾರವನ್ನು ನನಗೆ ಶಿವಲಿಂಗೇಗೌಡರು ತಿಳಿಸಿರುತ್ತಾರೆ. ನನ್ನನ್ನು ಯಾವ ಸಮಯದಲ್ಲಿ ಕರೆಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರೆದು ತಾಲ್ಲೂಕು ಕಛೇರಿ ಹತ್ತಿರ ನಾನು ಹೋಗಿದ್ದು ಅಲ್ಲಿ ಶಿವಲಿಂಗೇಗೌಡ ಸಹ ಬಂದಿದ್ದು ಆಗ ನನಗೆ ಶಿವಲಿಂಗೇಗೌಡರು ವಿಲ್ ಮಾಡುವ ವಿಚಾರವನ್ನು ತಿಳಿಸಿರುತ್ತಾರೆ. ನಾನು ತಹಶೀಲ್ದಾರ್ ಕಛೇರಿಗೆ ತಹಶೀಲ್ದಾರ್ ರವರನ್ನು ಭೇಟಿ ಮಾಡಲು ಹೋಗಿದ್ದೇನು. ವಿಲ್ ಅನ್ನು ಯಾರು ಬರೆಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ವಿಲ್ ಗಳಿಗೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ವಿಲ್ ಗಳಿಗೆ ನಿಮ್ಮ ಸಮಕ್ಷಮ ಯಾರು ಯಾರು ಸಹಿ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ವಿಲ್ ಮಾಡುವ ಸಂದರ್ಭದಲ್ಲಿ ನಾನು ಅಪ್ರಾಪ್ತನಾಗಿದ್ದೇನು ಎಂದರೆ ಸರಿಯಲ್ಲ. ನಾನು ಅಪ್ರಾಪ್ತ ವಯಸ್ಕನಾಗಿರುವ ಸಂದರ್ಭದಲ್ಲಿ ವಿಲ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಗ ನಾನು ಅಪ್ರಾಪ್ತ ವಯಸ್ಕನಾಗಿದ್ದು ಆ ವಿಚಾರವನ್ನು ಆಗಿಲ್ಲವೆಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಶಿವಲಿಂಗೇಗೌಡರು ಸ್ನೇಹಿತರಾಗಿದ್ದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ವಿಲ್ ಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದ್ಲಿಃ 05.06.1989 ರಂದು ಶಂಕರೇಗೌಡ ರವರು ಎಷ್ಟು ವಿಲ್ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.